# ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಪರೀಕ್ಷೆ -2002

## ಸಾಮಾನ್ಯ ಜ್ಞಾನ

**ಸಮಯ: ಎರಡು ಗಂಟೆ ಮೂವತ್ತು ನಿಮಿಷಗಳು** **ಅಂಕಗಳು:150**

1. ಬಾಯ್ಸ್ ಸ್ಕೌಟ್ ಸ್ಥಾಪಿಸಿವರು ?
   1. ಅನಿಬೆಸೆಂಟ್
   2. ಸುಭಾಷ್ ಚಂದ್ರಬೋಸ್
   3. ಬೇಡನ್ ಪೊವೆಲ್
   4. ವಿಲಿಯಂ ಬೆಂಟಿಕ್

2. ಮೊದಲ ಆಧುನಿಕ ಒಲಿಂಪಿಕ್ ಪಂದ್ಯ ನಡೆದ ಸ್ಥಳ
   1. ಅಥೆನ್ಸ್ 2. ಪ್ಯಾರಿಸ್
   3. ಮ್ಯಾಡ್ರಿಡ್ 4. ಮಾಸ್ಕೋ

3. ಭಾರತದ ಕರ್ಣಂ ಮಲ್ಲೇಶ್ವರಿಗೆ ಒಲಿಂಪಿಕ್ ಪ್ರಶಸ್ತಿ ದೊರಕಿದ ಕ್ರೀಡೆ
   1. ಅಥ್ಲೆಟಿಕ್ಸ್ 2. ವೇಟ್‌ಲಿಫ್ಟಿಂಗ್
   3. ಶಾಟ್‌ಪುಟ್ 3. ಶೂಟಿಂಗ್

4. ಅತಿ ಹೆಚ್ಚಿನ ಮುಸ್ಲಿಂ ಜನಾಂಗವಿರುವ ದೇಶ
   1. ಪಾಕಿಸ್ತಾನ 2. ಇಂಡಿಯಾ
   3.ಇಂಡೋನೇಷಿಯಾ 4. ಅಫ್ಘಾನಿಸ್ತಾನ

5. ಭಾರತದ ಅಮರ್ತ್ಯಸೇನ್‌ರವರಿಗೆ ನೊಬೆಲ್ ಪಾರಿತೋಷಕ ದೊರಕಿದ ಕ್ಷೇತ್ರ
   1. ಅರ್ಥಶಾಸ್ತ್ರ 2. ವೈದ್ಯಕೀಯ ಶಾಸ್ತ್ರ
   3. ಜೀವಶಾಸ್ತ್ರ 4. ಶಾಂತಿ

6. ಭಾರತದಲ್ಲಿ ಅತಿ ಹೆಚ್ಚು ಕಾಲ ಮುಖ್ಯಮಂತ್ರಿಯಾಗಿದ್ದವರು
   1. ಕರುಣಾಕರನ್
   2. ಕೆಂಗಲ್ ಹನುಮಂತಯ್ಯ
   3. ಜಯಲಲಿತಾ
   4. ಜ್ಯೋತಿ ಬಸು

7. ಅರವಿಂದೊ ಆಶ್ರಮವಿರುವ ಸ್ಥಳ ?
   1. ಕಲ್ಕತ್ತಾ 2. ಪೂನಾ
   3. ಪಾಂಡಿಚೆರಿ 4. ಅಡ್ಯಾರ್

8. ಅಂತರ್‌ರಾಷ್ಟ್ರೀಯ ಸಾಕ್ಷರತಾ ದಿನವನ್ನು ಆಚರಿಸುವ ತಾರೀಖು
   1. ಸೆಪ್ಟೆಂಬರ್ 8 2. ಸೆಪ್ಟೆಂಬರ್ 5
   3. ಮಾರ್ಚ್ 6 4. ಜನವರಿ 30

9. ಇತ್ತೀಚೆಗೆ ವಿಧ್ವಂಸಕರು ಆಕ್ರಮಣ ಮಾಡಿದ ಪೆಂಟಗನ್ ಇರುವ ಸ್ಥಳ
   1. ನ್ಯೂಯಾರ್ಕ್ 2. ನ್ಯೂಜೆರ್ಸಿ
   3. ಚಿಕಾಗೊ 4. ವಾಷಿಂಗ್‌ಟನ್

10. ಫ್ರಾನ್ಸಿನ ಕ್ರಾಂತಿಯು ಆರಂಭವಾದ ವರ್ಷ
    1. 1780 2. 1776
    3. 1717 4. 1789

11. ಮೊಟ್ಟ ಮೊದಲಿಗೆ ಭಾರತದಲ್ಲಿ ಬಂದು ನೆಲೆಸಿದ ಯೂರೋಪಿಯನ್ನರು
    1. ಇಂಗ್ಲಿಷರು 2. ಡಚ್ಚರು
    3. ಪೋರ್ಚಗೀಸರು 4. ಫ್ರೆಂಚರು

12. ಅಂತರ್‌ರಾಷ್ಟ್ರೀಯ ನ್ಯಾಯಾಲಯ ಇರುವ ಸ್ಥಳ
    1. ಪ್ಯಾರಿಸ್ 2. ವಾಷಿಂಗ್‌ಟನ್
    3. ಜಿನೀವಾ 4. ಹೇಗ್

13. ಭಾರತದ ಪ್ರಸ್ತುತ ವಿದೇಶಾಂಗ ಸಚಿವರು
    1. ಯಶವಂತ ಸಿನ್ಹಾ
    2. ಪ್ರಮೋದ್ ಮಹಾಜನ್
    3. ಜಸ್ವಂತ್ ಸಿಂಗ್
    4. ಎಲ್. ಕೆ. ಅಡ್ವಾನಿ

14. ಭಾರತದ ಸಿಲಿಕಾನ್ ವ್ಯಾಲಿ ಎಂದು ಪ್ರಖ್ಯಾತಿ ಹೊಂದಿರುವ ರಾಜ್ಯ
    1. ಮಹಾರಾಷ್ಟ್ರ 2. ಆಂಧ್ರ ಪ್ರದೇಶ
    3. ಕರ್ನಾಟಕ 4. ತಮಿಳುನಾಡು

15. 'ದಿ ಡಿಸ್ಕವರಿ ಆಫ್ ಇಂಡಿಯಾ' ಪುಸ್ತಕವನ್ನು ಬರೆದವರು
    1. ಗಾಂಧೀಜಿ 2. ಜಾರ್ಜ್ ಆರ್ವೆಲ್
    3. ಜವಾಹರಲಾಲ್ ನೆಹರು
    4. ರವೀಂದ್ರನಾಥ್ ಠಾಗೂರ್

16. ದ್ಯುತಿ ಸಂಶ್ಲೇಷಣೆ ಕ್ರಿಯೆಗೆ ಬೇಕಾಗುವ ಶಕ್ತಿಯ ಮೂಲ
    1. ನೀರು 2. ಸೂರ್ಯನ ಬೆಳಕು
    3. ಪತ್ರ ಹರಿತ್ತು 4. ಇಂಗಾಲದ – ಡೈ – ಆಕ್ಸೈಡ್

17. ವಿಟಮಿನ್ – ಸಿ ಕೊರತೆಯಿಂದ ಉಂಟಾಗುವ ಅನಾರೋಗ್ಯ

1. ಬೆರಿಬೆರಿ 2. ರಿಕೆಟ್ಸ್

3. ರಾತ್ರಿ ಕುರುಡುತನ 4. ಸ್ಕರ್ವಿ

18. ಟೆಲಿಫೋನ್ ಕಂಡು ಹಿಡಿದಂತಹ ವಿಜ್ಞಾನಿ

1. ಗ್ರಹಾಂ ಬೆಲ್

2. ಸ್ಯಾಮ್ಯುಯೆಲ್ ವೋರ್ಸ್

3. ಜೋಸೆಫ್ ಹೆನ್ರಿ

4. ವಿಲಿಯಂ ಕುಕ್

19. ಈ ಕೆಳಗಿನ ಯಾವ ಕ್ಷೇತ್ರಕ್ಕೆ ಆಕಾಶಕಾಯಗಳ ಅಧ್ಯಯನ ಸಂಬಂಧಿಸಿದೆ?

1. ಜ್ಯೋತಿ ಶಾಸ್ತ್ರ 2. ಖಗೋಳ ಶಾಸ್ತ್ರ

3. ಭೂ ವಿಜ್ಞಾನ 4. ಜ್ಯೋತಿ ಭೌತವಿಜ್ಞಾನ

20. ವಿದ್ಯುತ್ ಪ್ರವಾಹವನ್ನು ಅಳೆಯುವ ಮಾಪಕ ಯಂತ್ರ

1. ಅಲ್ಟಿಮೀಟರ್ 2. ಇಲೆಕ್ಟ್ರೋಸ್ಕೋಪ್

3. ಅನಿಮೊ ಮೀಟರ್ 4. ಗ್ಯಾಲ್ವನೊ ಮೀಟರ್

21. ಜೈವಿಕ ವಿಕಾಸನದ ಪರಿಕಲ್ಪನೆಯನ್ನು ಪ್ರತಿಪಾದಿಸಿದವರು

1. ಚಾರ್ಲ್ಸ್ ಡಾರ್ವಿನ್ 2. ಮೆಂಡಲ್

3. ಲೆಮಾರ್ಕ್ 4. ಲಿನಿಯಸ್

22. ದೇಹದ ಯಾವ ಅಂಗವು ಕ್ಷಯರೋಗಕ್ಕೆ ತುತ್ತಾಗುತ್ತದೆ?

1. ಪಿತ್ತಜನಕಾಂಗ 2. ಉದರ

3. ಹೃದಯ 4. ಶ್ವಾಸಕೋಶ

23. ದ್ವಿದಳ ಧಾನ್ಯದಲ್ಲಿ ಇದು ಯಥೇಚ್ಛವಾಗಿರುತ್ತದೆ

1. ಎಣ್ಣೆ 2. ವಿಟಮಿನ್

3. ಪಿಷ್ಟ 4. ಪ್ರೋಟಿನ್

24. ಗಳಗಂಡ ಕಾಯಿಲೆಯು ಈ ಕೆಳಗಿನ ಕೊರತೆಯಿಂದ ಉಂಟಾಗುತ್ತದೆ

1. ಕಬ್ಬಿಣ 2. ಕ್ಯಾಲ್ಸಿಯಂ

3. ಸೋಡಿಯಂ 4. ಅಯೋಡಿನ್

25. ಇದು ಥಾಯ್‌ಲ್ಯಾಂಡ್ ದೇಶದ ನಾಣ್ಯದ ಹೆಸರು

1. ರೂಪಾಯಿ 2. ಪಿಸೊ

3. ಬಾಹಟ್ 4. ಡಾಲರ್

26. 'ನಜಭಜಜಂಜರಂ' – ಈ ಗಣ ವಿನ್ಯಾಸವಿರುವ ವೃತ್ತ .....

1. ಉತ್ಪಲಮಾಲಾ ವೃತ್ತ 2. ಸ್ರಗ್ಧರಾ ವೃತ್ತ

3. ಚಂಪಕಮಾಲಾ ವೃತ್ತ 4. ಶಾರ್ದೂಲ ವಿಕ್ರಿಡೀತ ವೃತ್ತ

27. ಅಕ್ಕಮಹಾದೇವಿಯ ವಚನ ಅಂಕಿತ ....

1. ಕೂಡಲಸಂಗಮದೇವ

2. ಚನ್ನಮಲ್ಲಿಕಾರ್ಜುನ

3. ಗುಹೇಶ್ವರಾ

4. ಕಪಿಲಸಿದ್ಧ ಮಲ್ಲಿಕಾರ್ಜುನ

28. ತತ್ಪುರುಷ ಸಮಾಸಕ್ಕೆ ನಿದರ್ಶನ .....

1. ಅರಮನೆ 2. ಇರ್ಮನೆ

3. ಕೆಮ್ಮನೆ 4. ಹಿಮ್ಮನೆ

29. ದಬದಬ ಎಂಬುದು....

1. ಕೃದಂತಾವ್ಯಯ

2. ಕ್ರಿಯಾರ್ಥಕಾವ್ಯಯ

3. ಅವಧಾರನಾರ್ಥಕಾವ್ಯಯ

4. ಅನುಕರಣಾವ್ಯಯ

30. ' ಪಾಠಶಾಲೆ' ಪದದಲ್ಲಿನ 'ಠ್ ' ಎಂಬುದು –

1. ಅಲ್ಪ ಪ್ರಾಣಾಕ್ಷರ 2. ದೀರ್ಘಾಕ್ಷರ

3. ಮಹಾಪ್ರಾಣಾಕ್ಷರ 4. ಅಘೋಷಿತಾಕ್ಷರ

31. ' ಕರ್ನಾಟಕ ಕವಿ ಚೂತವನ ಚೈತ್ರ ' ಬಿರುದಾಂಕಿತ ಕವಿ....

1. ಲಕ್ಷ್ಮೀಶ 2. ವಾಲ್ಮೀಕಿ

3. ಕುಮಾರವ್ಯಾಸ 4. ವ್ಯಾಸ

32. ' –ಇಂದ ' ಪ್ರತ್ಯಯ ಯಾವ ವಿಭಕ್ತಿ?

1. ಸಪ್ತಮೀ 2. ದ್ವಿತೀಯ

3. ಷಷ್ಠೀ 4. ತೃತೀಯ

33. ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಪ್ರಾರಂಭದ ವರ್ಷ ಆಗಸ್ಟ್ 15 ರಿಂದ ....

1. 1997–98 2. 1996–97

3. 1998–99 4. 2000–01

34. ' ವನ ' ಪದದ ಕನ್ನಡ ರೂಪ .....

1. ತೋಟ 2. ಬನ

3. ಕಾಡು 4. ಅಡವಿ

35. ಕನ್ನಡ ನಾಡಿನ ರಾಜ್ಯ ಭಾಷೆ.....

1. ಕೊಡವ 2. ಕೊಂಕಣಿ

3. ಕನ್ನಡ 4. ಕೊರವ

36. 'ಙ್, ಞ, ಣ್, ನ್ ಮತ್ತು ಮ್' ಧ್ವನಿಗಳು .....

1. ಅನುಸ್ವಾರ ಧ್ವನಿಗಳು 2. ಅನುನಾಸಿಕ ಧ್ವನಿಗಳು

3. ಅಲ್ಪಪ್ರಾಣ ಧ್ವನಿಗಳು 4. ಅವರ್ಗೀಯ ಧ್ವನಿಗಳು

37. 1-2, 4-5ನೇ ಸಾಲು ಒಂದಕ್ಕೊಂದು ಸಮನಾಗಿದ್ದು ಮೂರು ಮತ್ತು ನಾಲ್ಕು ಮಾತ್ರೆಗಳ ನಾಲ್ಕು ಗಣ; 3-6ನೇ ಸಾಲು ಒಂದೇ ಆಗಿದ್ದು 3-4 ಮಾತ್ರೆಗಳ ಆರು ಗಣ ಮೇಲೊಂದು ಗುರುವಿನಿಂದ ಕೂಡಿರುವ ಪದ್ಯ..............

1. ಭೋಗ ಷಟ್ಪದಿ 2. ಶರ ಷಟ್ಪದಿ

3. ಕುಸುಮ ಷಟ್ಪದಿ 4. ಭಾಮಿನಿ ಷಟ್ಪದಿ

38. ''ಬೇಸಗೆ'' ಪದದ ಗ್ರಾಮ್ಯ ರೂಪ........

1. ಬ್ಯಾಸಿಗೆ 2. ಬೇಸಿಗೆ

3. ಬ್ಯಾಸುಗೆ 4. ಬ್ಯಾಸಿಕೆ

39. ದ.ರಾ.ಬೇಂದ್ರೆ ಅವರ 'ಅರಳು-ಮರಳು' ಕವನ ಸಂಗ್ರಹಕ್ಕೆ ಸಂದ ಪ್ರಶಸ್ತಿ.........

1. ಜ್ಞಾನಪೀಠ ಪ್ರಶಸ್ತಿ
2. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
3. ಪಂಪ ಪ್ರಶಸ್ತಿ
4. ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

40. 'ಕನ್ನಡದ ಕಣ್ವ' ಎಂದು ಹೆಸರಾದವರು.........

1. ತೀ.ನಂ. ಶ್ರೀ 2. ಬಿ.ಎಂ. ಶ್ರೀ

3. ಶ್ರೀರಂಗ 4. ವಿ.ಸೀ

41.'ಕರ್ನಾಟಕ ಸಂಗೀತ ಪಿತಾಮಹ' ಎಂದೇ ಜನಪ್ರಿಯರಾದವರು....

1. ಕನಕದಾಸ
2. ವಿಜಯದಾಸ
3. ಪುರಂದರದಾಸ
4. ಜಗನ್ನಾಥದಾಸ

42. 'ಮಗು' ಪದದ ಬಹುವಚನ ರೂಪ.......

1. ಮಕ್ಕಳು 2. ಮಗು

3. ಮಗುಗಳು 4. ಮಕ್ಕಳಂದಿರು

43. ಕನ್ನಡದ ಮೊದಲ ಶಾಸನ.........

1. ಬಾದಾಮಿ ಶಾಸನ
2. ತಮಟೆಕಲ್ಲು ಶಾಸನ
3. ಬೇಲೂರು ಶಾಸನ
4. ಹಲ್ಮಿಡಿ ಶಾಸನ

44. 'ಬೆಟ್ಟದಾವರೆ' ಎಂಬುದು ...........

1. ಆಗಮಸಂಧಿ 2. ಆದೇಶಸಂಧಿ

3. ಲೋಪಸಂಧಿ 4. ಗುಣ ಸಂಧಿ

45. 'ಹೆಬ್ಬಾಗಿಲು' ಎಂಬುದು .............

1. ದ್ವಿಗು ಸಮಾಸ
2. ಅಂಶೀ ಸಮಾಸ
3. ಕರ್ಮಧಾರೆಯ ಸಮಾಸ
4. ತತ್ಪುರುಷ ಸಮಾಸ

46. ಗುರು-ಲಘು ಮೂರಿರೆ ಯಾವ ಗಣ? ..........

1. ಮ...........ನಗಣ
2. ಜ............ರಗಣ
3. ಸ....ತಗಣ
4. ಭ.........ಯಗಣ

47. ಕನ್ನಡದಲ್ಲಿ ಮೊದಲು ಜ್ಞಾನಪೀಠ ಪ್ರಶಸ್ತಿ ಪಡೆದವರು.........

1. ದ.ರಾ.ಬೇಂದ್ರೆ
2. ಶಿವರಾಮಕಾರಂತ
3. ವಿ.ಕೃ. ಗೋಕಾಕ್
4. ಕುವೆಂಪು

48. ವಸ್ತ್ರಪದದಲ್ಲಿನ ಸ್ +ತ್+ರ್+ಅ...ಸ್ತ್ರ ಎಂಬುದು .........

1. ವಿಜಾತಿ ಒತ್ತಕ್ಷರ 2. ಗುಣಿತಾಕ್ಷರ

3. ಸಜಾತಿ ಒತ್ತಕ್ಷರ 4. ಮೂಲಾಕ್ಷರ

49. ಸಂಭವನಾರ್ಥಕ ಕ್ರಿಯಾಪದ ರೂಪ ...........

1. ಹೋಗನು 2. ಹೋದನು

3. ಹೋದಾನು 4. ಹೋಗುವನು

50. ಕೇಶಿ ರಾಜ ಬರೆದ ವ್ಯಾಕರಣ ಕೃತಿ ..........

1. ಶಬ್ದಾನುಶಾಸನ
2. ಕವಿರಾಜ ಮಾರ್ಗ
3. ಭಾಷಾಭೂಷಣ
4. ಶಬ್ದಮಣಿ ದರ್ಪಣ

# English

51. "Am I responsible for your failures" asked the man. The man suggested that

1. he was responsible
2. he was not responsible
3. he had failed
4. he was a responsible person

52. The wolf and the lamb went into the forest, but only the former returned. Former means.

1. the wolf
2. the thumb
3. earlier
4. peasant

53. The money is yet to be recovered from the ailing doctor. This means that the doctor
1. has paid
2. is missing
3. has been paid
4. has not paid

54. I am not as brave as my brother
The correct question which gets the underlined words as answer is
1. Are you as brave as your brother ?
2. Am I not as brave as my brother ?
3. Is your brother brave?
4. Am I a strong person?

55. The teacher said to the students, "Don't copy from your neighbours" This means
1. The teacher suggested to the students that they should not copy from their neighbours
2. The teacher threatened the students not to copy from their neighbours
3. The teacher instructed the students not to copy from their neighbours
4. The teacher requested the students not to copy from their neighbours

56. ................. every child had enough to eat?
Complete this sentence using the appropriate "be-verb.
1. Have 2. Is
3. Has 4. Does

57. If any of the candidates cheated, he would be disqualified. This sentence tells us :
1. Some of the candidates cheated
2. None of the candidates cheated
3. All the candidates cheated
4. Any candidate who cheated would be disquali fied

58. I ......... read a book tonight
Complete the sentence using the most appropri ate choice
1. Will 2. shall
3. am going to 4. am to

59. I ............if he will come
Fill in the blank using the most appropriate choice
1. will doubt 2. doubted
3. going to doubt 4. doubt

60. He still ........ what should be done
Fill in the blank using the most appropriate choice
1. is considering
2. was considering
3. will be considering
4. will consider

61. Sita has broken the stick
The passive voice of this sentence is
1. The stick has been broken by Sita
2. The stick was broken by Sita
3. The stick is being broken by Sita
4. The stick is broken by Sita

62. The opposite of assent is
1. Accent 2. Dissent
3. low 4. Descent

63. A shop keeper who sells fresh and green vegetable is a
1. Vegetarian 2. vendor
3. grocer 4. greengrocer

64. The minister along with his officers....... to my village tomorrow
1. is coming 2. are coming
3. were coming 4. was coming

65. We went to this house ..... last Thursday.
the correct word to be filled in the blank is
1. or 2. at
3. by 4. on

66. I have been waiting for you ...... eight "O" clock.
The correct word to be filled in the blank is
1. Since 2. for
3. at 4. from

67. ............meat we bought yestertday has gone bad.
The correct word that can be used in the blank.
1. a 2. Some 3. the 4. one

68. He is too wise to get involved in ...... argument. Use the most appropriate word in the blank.

1. the  2. a  3. some  4. an

69. I gave him .................. dollar for the work. Fill in the blank with the most appropriate word.

1. a  2. the  3. some  4. an

70. She is one of the most intelligent girl in her class. This means.

1. There are some intelligent girls in her class
2. There is no other intelligent girl in her class
3. No other girl in her class in an intelligent as she is
4. All the girls In her class are intelligent

71. Her essay is not so long as mine. This means.

1. My essay is longer than hers
2. Her essay is long
3. Her essay is as long as mine
4. Her essay is as short as mine

72. The book is not as interesting as the one I read last week. This means.

1. The book I read last week is the most interesting
2. The book I read last week is not interesting at all
3. The book I read last week is less interesting
4. The book I read last week is more interesting

73. You did not read that book ...............?

Choose the most appropriate question tag.

1. Didn't you  2. do you
3. did you  4. will you

74. Pass me the sugar ..................

1. would you  2. won't you
3. will you  4. do you

75. She.........join the university last year.

Fill in the blank using the most appropriate phrase.

1. is to  2. was to
3. were to  4. need to

## ವಿಜ್ಞಾನ

76. 1.5 ಅಂಪೇರ್ ವಿದ್ಯುತ್ ಪ್ರವಾಹ, 12 ವೋಲ್ಟ್ ಕಾರಿನ ದೀಪದ ಮೂಲಕ ಹರಿದರೆ, ಆ ದೀಪದ ಸಾಮರ್ಥ್ಯವು

1. 18 ವ್ಯಾಟ್  2. 10.6 ವ್ಯಾಟ್
3. 13.5 ವ್ಯಾಟ್  4. 8 ವ್ಯಾಟ್

77. ಈ ಕೆಳಗಿನವುಗಳಲ್ಲಿ ಅರೆವಾಹಕ ಯಾವುದು?

1. ಗಂಧಕ  2. ತಾಮ್ರ
3. ರಂಜಕ  4. ಸಿಲಿಕಾನ್

78. ಮಾನವನ ದೇಹದ ನಿರುಪಯುಕ್ತ ಅಂಗ

1. ಉಗುರು  2. ಅಪೆಂಡಿಕ್ಸ್
3. ಕಿರುಬೆರಳು  4. ಕೂದಲು

79. ಒಂದು ವಸ್ತುವಿನ ಮೇಲೆ 15 ನ್ಯೂಟನ್ ಬಲಪ್ರಯೋಗವಾದಾಗ, 60 ಮೀ.ಸೆಂ. ವೇಗೋತ್ಕರ್ಷ ಉಂಟಾದರೆ, ಆ ವಸ್ತುವಿನ ದ್ರವ್ಯರಾಶಿ

1. 900 ಕಿ.ಗ್ರಾಂ  2. 90 ಕಿ.ಗ್ರಾಂ
3. 4 ಕಿ.ಗ್ರಾಂ  4. 0.5 ಕಿ.ಗ್ರಾಂ

80. ಅಲ್ಕೈನುಗಳ ಸಾಮಾನ್ಯ ಸೂತ್ರ

1. $C_nH_{2n-2}$  2. $C_nH_{2n-2}$
3. $C_nH_{2n}$  4. $C_nH_n$

81. ಅಣುರೂಪದಲ್ಲಿರುವ ಸಾರಜನಕವನ್ನು ಇವುಗಳಲ್ಲಿ ಯಾವುದು ಹೀರಿಕೊಳ್ಳುವ ಶಕ್ತಿ ಹೊಂದಿದೆ?

1. ವೈರಸ್‌ಗಳು  2. ಬ್ಯಾಕ್ಟೀರಿಯಾ
3. ಪ್ರೋಟೋಜೋವ  3. ಫಂಗೈ

82. ಕತ್ತಲಿನಲ್ಲಿ ವಸ್ತುಗಳನ್ನು ನೋಡಲು ಬಳಸುವ ಕಿರಣ

1. ರಕ್ತಾತೀತ ವಿಕಿರಣ  2. ನೇರಳಾತೀತ ವಿಕಿರಣ
3. ಕ್ಷ– ಕಿರಣಗಳು  4. ಗ್ಯಾಮಾ ಕಿರಣಗಳು

83. ಪ್ರಸಾರವಾಗುತ್ತಿರುವ ಅಡ್ಡಲೆಯ ಒಂದು ಉಬ್ಬು ಮತ್ತು ಅದರ ಪಕ್ಕದ ತಗ್ಗುಗಳಿಗಿರುವ ದೂರ 0.5 ಮೀ. ಅಲೆಯ ತರಂಗ ದೂರ

1. 0.5 ಮೀ  2. 1ಮೀ
3. 1.5 ಮೀ  4. 2 ಮೀ

84. ಕೋಶದ 'ಶಕ್ತಿ ಗೃಹ'

1. ಲೈಸೋಜೋಮ್  2. ರೈಬೋಸೋಮ್
3. ಮೈಟೋಕಾಂಡ್ರಿಯ  4. ಕ್ಲೋರೋಪ್ಲಾಸ್ಟ್

85. $92^{u235}$ನ ಪರಮಾಣು ಬೀಜದಲ್ಲಿನ ಎಲೆಕ್ಟ್ರಾನ್‌ಗಳ ಸಂಖ್ಯೆ

1. 92  2. 235  3. 143  4. ಸೊನ್ನೆ

86. ಒಂದು ಖಾಲಿ ಪ್ಲಾಸ್ಕಿನ ತೂಕ 17 ಗ್ರಾಂ ಪೂರ್ತಿ ಮದ್ಯಸಾರದಿಂದ ತುಂಬಿದಾಗ 193 ಗ್ರಾಂ ತೂಗುತ್ತದೆ. ಮದ್ಯಸಾರದ ಸಾಂದ್ರತೆ 0.80 ಗ್ರಾಂ ಸೆಂ.ಮೀ. $^{-3}$ ಆದರೆ, ಪ್ಲಾಸ್ಕಿನ ಗಾತ್ರ

1. 100 ಸೆಂ.ಮೀ. 2. 180 ಸೆಂ.ಮೀ.

3. 200 ಸೆಂ.ಮೀ. 4. 220 ಸೆಂ.ಮೀ.

87. ಕ್ಲೋರಿನ್‌ನ ಮೂರು ಅಣುಗಳನ್ನು ಸರಿಯಾಗಿ ಸೂಚಿಸುವ ರೀತಿ

1. 6CI 2. $3CI_2$ 3. $2CI_3$ 4. $CI_6$

88. ವಾಯುಭಾರ ಮಾಪಕವನ್ನು ಕಲ್ಲಿದ್ದಲು ಗಣಿಯೊಳಗೆ ತೆಗೆದುಕೊಂಡು ಹೋದಾಗ, ಪಾದರಸದ ಮಟ್ಟವು

1. ಏರುತ್ತದೆ

2. ಇಳಿಯುತ್ತದೆ

3. ಮೊದಲು ಏರಿ ನಂತರ ಇಳಿಯುತ್ತದೆ

4. ಬದಲಾವಣೆಯಾಗುವುದಿಲ್ಲ

89. ದ್ಯುತಿ ಸಂಶ್ಲೇಷಣೆ ಮುಂದುವರಿಯಲು ಅವಶ್ಯಕತೆ ಇಲ್ಲದಿರುವ ಅಂಶ.

1. ನೀರು 2. ಬೆಳಕು 3.ಆಮ್ಲಜನಕ 4.ಪತ್ರಹರಿತ್ತು

90. ಸೂರ್ಯನಿಗೆ ಅತಿ ಸಮೀಪದ ಗ್ರಹ

1. ಭೂಮಿ 2. ಮಂಗಳ

3. ಶುಕ್ರ 4. ಬುಧ

91. ಕರ್ಪೂರವನ್ನು ಉರಿಸಿದಾಗ

1. ಬೂದಿಯಾಗುತ್ತದೆ

2. ದ್ರವರೂಪಕ್ಕೆ ಬರುತ್ತದೆ

3. ದ್ರವ ರೂಪಕ್ಕೆ ಬಾರದೆ ಅನಿಲವಾಗುತ್ತದೆ

4. ದ್ರವರೂಪಕ್ಕೆ ಬಂದು ಅನಿಲವಾಗುತ್ತದೆ

92. ಹುಚ್ಚುನಾಯಿ ಕಡಿತದಿಂದ ಬರುವ ರೋಗ

1. ಕ್ಷಯ 2. ಕಾಮಾಲೆ

3. ರೇಬೀಸ್ 4. ಕ್ಯಾನ್ಸರ್

93. ಲೋಹಾಂಶವಿಲ್ಲದ ಕ್ಷಾರ

1. ಸೋಡಿಯಂ ಹೈಡ್ರಾಕ್ಸೈಡ್

2. ಅಮೋನಿಯಂ ಹೈಡ್ರಾಕ್ಸೈಡ್

3. ಕ್ಯಾಲ್ಸಿಯಂ ಹೈಡ್ರಾಕ್ಸೈಡ್

4. ಪೊಟಾಸಿಯಂ ಹೈಡ್ರಾಕ್ಸೈಡ್

94. ಮಧ್ಯವರ್ತಿಯ ಅವಶ್ಯಕತೆ ಇಲ್ಲದೆ ಶಾಖ ಪ್ರಸಾರವಾಗುವ ಬಗೆ

1. ಉಷ್ಣವಹನ 2. ಉಷ್ಣವಿಕಿರಣ

3. ಉಷ್ಣ ನಿರೋಧಕ 4. ಉಷ್ಣಸಂವಹನ

95. ಅಕಶೇರುಕಕ್ಕೆ ಉದಾಹರಣೆ

1. ಎರೆಹುಳು 2. ಕಪ್ಪೆ 3. ಹಾವು 4. ಮನುಷ್ಯ

96. ಇವುಗಳಲ್ಲಿ ಯಾವುದು ರಾಸಾಯನಿಕ ಬದಲಾವಣೆ?

1. ಮಂಜುಗಡ್ಡೆ ಕರಗುವುದು

2. ಮೇಣ ಕರಗುವುದು

3. ನೀರು ಆವಿಯಾಗುವುದು

4. ಬೆಣ್ಣೆ ತುಪ್ಪವಾಗುವುದು

97. 'ಡಿ' ಜೀವಸತ್ವದ ಕೊರತೆಯಿಂದ ಉಂಟಾಗುವುದು

1. ಇರುಳುಕುರುಡು 2. ಬೆರಿಬೆರಿ

3. ರಿಕೆಟ್ಸ್ 4. ಸ್ಕರ್ವಿ

98. ಅಡಿಗೆ ಸೋಡಾದ ಮತ್ತೊಂದು ಹೆಸರು

1. ಸೋಡಿಯಂ ಬೈಕಾರ್ಬೋನೇಟ್

2. ಸೋಡಿಯಂ ಕಾರ್ಬೋನೇಟ್

3. ಸೋಡಿಯಂ ಕ್ಲೋರೈಡ್

4. ಸೋಡಿಯಂ ಹೈಡ್ರಾಕ್ಸೈಡ್

99. ಇವುಗಳಲ್ಲಿ ಯಾವುದನ್ನು ಅಳೆಯಲು ಜ್ಯೋತಿರ್ವರ್ಷವನ್ನು ಮೂಲ ಮಾನವಾಗಿ ಬಳಸುವರು?

1. ಬೆಳಕಿನ ತೀವ್ರತೆ 2. ಕಾಲ

3. ದೂರ 4. ಬೆಳಕಿನ ವೇಗ

100. ಸೂಕ್ಷ್ಮಾಣು ಜೀವಿಗಳಲ್ಲಿ ಅತಿ ಸಣ್ಣದು

1. ಬ್ಯಾಕ್ಟೀರಿಯ 2. ಆಲ್ಗೆ

3. ಪ್ರೋಟಜೋವ 4. ವೈರಸ್

## ಗಣಿತ

101. $A=\{4,5,6\}$ ಮತ್ತು $B=\{0,4,6\}$ ಆದಾಗ AUB= ...........

1. $\{0,5\}$ 2. $\{4,6\}$

3. $\{0,4,5,6\}$ 4. $\{\ \}$

102. $(m+n)^2$ ನ ವಿಸ್ತಾರ ...............

1. $m^2+n^2+mn$ 2. $m+n+2mn$

3. $m^2-n^2+2mn$ 4. $m^2+n^2+2mn$

103. $x=-1, y=3$ ಆದಾಗ $2x+5y$ ನ ಬೆಲೆ ..........

1. 14 2. −13 3. 13 4. −14

104. ಕೆಳಗೆ ಕೊಟ್ಟಿರುವ ಪ್ರಾಪ್ತಾಂಕಗಳಲ್ಲಿ ಮೊದಲನೆ ಚತುರ್ಥಾಂಕಕ್ಕಿಂತ ($Q_3$) ಹೆಚ್ಚಾಗಿ ಅಂಕ ಪಡೆದಿರುವವರು ಎಷ್ಟು ಮಂದಿ ಇದ್ದಾರೆ?